# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಗೊಟ್ಟಿಗೆರೆ ವಾರ್ಡ್ ಸಂಖ್ಯೆ–194,

## ವಾರ್ಡ್ 194 ದಿನಾಂಕ: 09–05–2021 ರಂದು ನಡೆದ ಸಭೆಯ ನಡವಳಿಗಳು.

Zoom Meeting ಮುಖಾಂತರ ದಿನಾಂಕ: 09–05–2021 ರಂದು ಸಮಯ: 03:00 ಘಂಟೆಗೆ ನಡೆದ ಮೊದಲನೆಯ Ward Decentralized Committee (WDC) ಸಭೆಯ ನಡವಳಿಗಳು.

**ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳು ಹಾಗೂ ಸ್ಥಳೀಯ ಸಂಘ ಸದಸ್ಯರುಗಳು.**

1. ಶ್ರೀಮತಿ ವಿ.ಕೆ ರಮಾಮಣಿ, ಕೆ.ಎಮ್.ಎ.ಎಸ್ ಅಧ್ಯಕ್ಷರು, WDC ಗೊಟ್ಟಿಗೆರೆ.
2. ಶ್ರೀ ಲಕ್ಷ್ಮೀಪತಿ, ವೈದ್ಯಾಧಿಕಾರಿಗಳು, ಪಿ.ಹೆಚ್.ಸಿ ಗೊಟ್ಟಿಗೆರೆ.
3. ಶ್ರೀ ಮಾರುತಿ, ಸಹಾಯಕ ಅಭಿಯಂತರರು, ಗೊಟ್ಟಿಗೆರೆ.
4. ಶ್ರೀ ರಮೇಶ್, ಆರೋಗ್ಯ ಪರಿವೀಕ್ಷಕರು, ಗೊಟ್ಟಿಗೆರೆ.
5. ಶ್ರೀ ಸುಬ್ಬು ಹೆಗಡೆ, ಅಧ್ಯಕ್ಷರು, ಕ್ಲಾಸಿಕ್ ಆರ್ಚರ್ಡ್ಸ್.
6. ಶ್ರೀಮತಿ ಕೀರ್ತಿ, ಅಧ್ಯಕ್ಷರು, ಹಿಮಗಿರಿ ಮೆಡೋಸ್, ಗೊಟ್ಟಿಗೆರೆ.
7. ಶ್ರೀ ಜಿ.ಎಸ್. ರಾವ್, ಅಧ್ಯಕ್ಷರು, ಹೆಚ್.ಎಮ್ ವರ್ಲ್ಡ್ ಸಿಟಿ.
8. ಶ್ರೀ ರಂಗೇಗೌಡ, ಅಧ್ಯಕ್ಷರು, ಸೌತ್ ಅವೆನ್ಯೂ
9. ಶ್ರೀ ಶಶಿಧರ, ಅಧ್ಯಕ್ಷರು, ಪರಿವರ್ತನ ಕ್ಷೇಮಾಭಿವೃದ್ಧಿ.
10. ಶ್ರೀ ಶಿವಕುಮಾರ ಗೌಡ, 7ನೇ ಬ್ಲಾಕ್, 9ನೇ ಹಂತ, ಜೆ.ಪಿ ನಗರ ಬಡಾವಣೆ, ಗೊಟ್ಟಿಗೆರೆ
11. ಶ್ರೀ ಪ್ರವೀಣ್, ವೀವರ್ಸ್ ಬಡಾವಣೆ, ಗೊಟ್ಟಿಗೆರೆ

**ಅಧ್ಯಕ್ಷರು ಸಭೆಯಲ್ಲಿ ಭಾಗವಹಿಸಿದವರನ್ನು ಸ್ವಾಗತಿಸುತ್ತಾ ದಿನಾಂಕ: 07–05–2021 ರ ಸರ್ಕಾರಿ ಆದೇಶ ಸಂಖ್ಯೆ: RD 158 TNR 2020(1), ಅನ್ವಯ ವಾರ್ಡ್ ಮಟ್ಟದಲ್ಲಿ Ward Decentralized Triage and Emergency Response Committee ಯನ್ನು ಈ ಕೂಡಲೇ ರಚಿಸಲು ಹಾಗೂ ವಿವರಿಸಿರುವ ಈ ಕೆಳಕಂಡ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುವ ಬಗ್ಗೆ ತಿಳಿಸಿರುತ್ತಾರೆ.**

1. **WDC ತಂಡವನ್ನು ಸದಸ್ಯರುಗಳು ಈ ಕೆಳಕಂಡಂತೆ ರಚಿಸಬಹುದಾಗಿರುತ್ತದೆ.**

   ವಾರ್ಡ್ ವ್ಯಾಪ್ತಿಯಲ್ಲಿನ ಜನಪ್ರತಿನಿಧಿಗಳು, ಪಾಲಿಕೆಯ ವಾರ್ಡ್ ಅಧಿಕಾರಿಗಳು, ವಾರ್ಡ್‌ಗೆ ಸಂಬಂಧಿಸಿದ ಇತರೆ ಇಲಾಖೆಯ ಅಧಿಕಾರಿಗಳು, (ಪಿ.ಹೆಚ್.ಸಿ, ಬಿ.ಎಲ್.ಓ ಒಳಗೊಂಡಂತೆ), RWA / Civil Society Organisation, NGO (Health Sector) ಹಾಗೂ ಸರ್ಕಾರದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಇತರೆ NGO ಗಳು, ಸ್ಥಳೀಯ ಸಂಘಗಳನ್ನು ಒಳಗೊಂಡಂತೆ ಸಧಸ್ಯ ಕಾರ್ಯದರ್ಶಿಗಳಾದ ಹಿರಿಯ ಆರೋಗ್ಯ ಪರಿವೀಕ್ಷಕರು WDC ತಂಡದ ಸದಸ್ಯರುಗಳನ್ನು ರಚಿಸುವ ಬಗ್ಗೆ ಆದೇಶವನ್ನು ಹೊರಡಿಸಲು ಅಗತ್ಯ ಕ್ರಮ ವಹಿಸುವುದು.

2. **ತಂಡವು ಈ ಕಳಕಂಡ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ.**

   (i) ವಾರ್ಡ್‌ನಲ್ಲಿರುವ ಎಲ್ಲಾ ಸಾಮಾನ್ಯ ವೈದ್ಯರ ವಿವರಗಳನ್ನು ಕ್ರೂಢೀಕರಿಸುವುದು.

   (ii) ವಾರ್ಡ್‌ನಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಆರ್.ಡಬ್ಲ್ಯೂ.ಎ, ಅಪಾರ್ಟ್‌ಮೆಂಟ್ಸ್ ಹಾಗೂ ಕೊಳಗೇರಿಗಳನ್ನು ಸಂಪರ್ಕಿಸಲು ಸಂಬಂಧಪಟ್ಟ ವ್ಯಕ್ತಿಗಳನ್ನು ಗುರುತಿಸಿ ಮ್ಯಾಪ್ ಮಾಡುವುದು.

   (iii) ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ NGOs ಗಳನ್ನು ಮ್ಯಾಪ್ ಮಾಡುವುದು. ಸದರಿ NGOs ರವರು ಒದಗಿಸಬಹುದಾದ ಸಂಪಲನ್ಮೂಲಗಳನ್ನು (oxygen concentrators, home oxygen setup) ಗಳನ್ನು ಮ್ಯಾಪ್ ಮಾಡುವುದು.

   (iv) ಆರ್.ಡಬ್ಲ್ಯೂ.ಎ ಗಳು, ಅಪಾರ್ಟ್‌ಮೆಂಟ್ ಸಮುದಾಯಗಳು, ಕೊಳಗೇರಿಗಳು, ಎಸ್.ಸಿ/ಎಸ್.ಟಿ, ಮಂಗಳ ಮುಖಿಯರು ಮತ್ತು ಮಹಿಳೆಯರು ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸಿ ಸ್ವಯಂಸೇವಕರಾಗಬಹುದು.



Scanned by CamScanner

(v) ಕೋವಿಡ್-19 ಹಾರೈಕೆಗಾಗಿ ಬಳಸಬಹುದಾದ 30 ಹಾಸಿಗೆಗಳ ಆಸ್ಪತ್ರೆಗಳು ಸೇರಿದಂತೆ ಎಲ್ಲಾ ವೈದ್ಯಕೀಯ ಸೌಲಭ್ಯಗಳು, ಪಿ.ಎಚ್.ಸಿಗಳು, ಸಿ.ಸಿ.ಸಿಗಳು, ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳು, ಪರೀಕ್ಷಾ ಕೇಂದ್ರಗಳ ಮಾಹಿತಿಯನ್ನು ಅಪ್‌ಲೋಡ್ ಮಾಡುವುದು.

(vi) ಪಾಲಿಕೆಯ ಸಿಬ್ಬಂದಿ, ಅಂಗನವಾಡಿ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಮತ್ತು ವಾರ್ಡ್‌ಗಳಿಗೆ ನಿಯೋಜಿಸಿರುವ ಬಿ.ಎಲ್.ಓಗಳು, ಸ್ವಯಂಸೇವಕರು ಹಾಗೂ ಸಾಮಾನ್ಯ ವೈದ್ಯರುಗಳಿಗೆ ನೀಡಬೇಕಾದ ತರಬೇತಿಯನ್ನು ಆನ್‌ಲೈನ್‌ನಲ್ಲಿ ಆಯೋಜಿಸಲು ಕ್ರಮ ವಹಿಸುವುದು.

**3. ವಾರ್ಡ್ ವ್ಯಾಪ್ತಿಯಲ್ಲಿ ವಾರ್ ರೂಂ ಅನ್ನು ರಚಿಸುವ ಬಗ್ಗೆ.**

ಈಗಾಗಲೇ ಗೊಟ್ಟಿಗೆರೆ ವಾರ್ಡ್ ಕಛೇರಿಯಲ್ಲಿ ವಾರ್ಡ್ ವಾರ್ ರೂಂ ಅನ್ನು ರಚಿಸಲಾಗಿದ್ದು, ವಾರ್ ರೂಂಗೆ ಅವಶ್ಯವಿರುವ ಮಾನವ ಸಂಪನ್ಮೂಲ / ದೂರವಾಣಿ ಸಂಪರ್ಕ ಹಾಗೂ ಇತರೆ ಸೌಲಭ್ಯವನ್ನು ಒದಗಿಸಲು ವಾರ್ಡ್ ಅಭಿಯಂತರರು ನಿಯಮಾನುಸಾರ ಅಗತ್ಯ ಕ್ರಮ ವಹಿಸುವುದು.

**4. ಗೊಟ್ಟಿಗೆರೆ ವಾರ್ಡ್ ವ್ಯಾಪ್ತಿಯಲ್ಲಿ Triage Centre ಅನ್ನು ಸ್ಥಾಪಿಸುವದು.**

ಕೋವಿಡ್-19 ಪರೀಕ್ಷೆಯನ್ನು ಕೈಗೊಂಡನಂತರ ನಾಗರೀಕರ ಆರೋಗ್ಯ ತಪಾಸಣೆಯನ್ನು ಕೈಗೊಳ್ಳಲು Triage Centre ಅನ್ನು ಸ್ಥಾಪಿಸಬೇಕಾಗಿದ್ದು, ಈ ಸಂಬಂಧ ವಾರ್ಡ್ ಅಭಿಯಂತರರು, ಆರೋಗ್ಯಾಧಿಕಾರಿ ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು ಅಧ್ಯಕ್ಷರೊಂದಿಗೆ ಸೂಕ್ತ ಜಾಗವನ್ನು ಗುರುತಿಸಿ ಅವಶ್ಯವಿರುವ ಸೌಲಭ್ಯಗಳನ್ನು ಒದಗಿಸಲು ವಾರ್ಡ್ ಅಭಿಯಂತರರು ನಿಯಮಾನುಸಾರ ಅಗತ್ಯ ಕ್ರಮ ವಹಿಸುವುದು.

**5. ಗೊಟ್ಟಿಗೆರೆ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಜಾಗೃತಿ ಕೇಂದ್ರವನ್ನು ರಚಿಸುವುದು.**

ಮನೆಯಲ್ಲಿ ಪ್ರತ್ಯೇಕವಾಗಿ ವಾಸಿಸಲು ಅಸಾಧ್ಯವಾದಲ್ಲಿ ಅಂತಹ ಕೋವಿಡ್-19 ಪಾಸಿಟೀವ್ ವ್ಯಕ್ತಿಗಳ ಆರೈಕೆಗಾಗಿ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಕೇರ್ ಸೆಂಟರ್ ಅನ್ನು ರಚಿಸಲು ಸೂಕ್ತ ಜಾಗವನ್ನು ಗುರುತಿಸಿ ಅವಶ್ಯವಿರುವ ಸೌಲಭ್ಯಗಳನ್ನು ಒದಗಿಸಲು ವಾರ್ಡ್ ಅಭಿಯಂತರರು ನಿಯಮಾನುಸಾರ ಅಗತ್ಯ ಕ್ರಮ ವಹಿಸುವುದು.

**6. IEC ಚಟುವಟಿಕೆಗಳನ್ನು ಕೈಗೊಳ್ಳುವ ಬಗ್ಗೆ**

a. ವಾರ್ಡ್‌ನಲ್ಲಿರುವ ಪ್ರತಿ ನಾಗರೀಕರಿಗೂ ಸಹ ಮಾಸ್ಕ್ ಮತ್ತು ಸಾಮಾಜಿಕ ಅಂತರ, ಸೋಂಕಿನ ಲಕ್ಷಣಗಳು, ಪಲ್ಸ್(ನಾಡಿ ಮಿಡಿತ) ಆಕ್ಸಿಮೀಟರ್ ಮತ್ತು ರೋಗದ ಸ್ಥಿತಿಯ ಬಗ್ಗೆ ಅರಿವು ಮೂಡಿಸುವುದು.

b. ಪ್ರತ್ಯೇಕ ಐಸೋಲೇಷನ್, ಕೋವಿಡ್ ಪರೀಕ್ಷೆ ಹೇಗೆ ಮಾಡಿಸಬೇಕು ಮತ್ತು ನಾಡಿ ಮಿಡಿತ(ಪಲ್ಸ್) ಆಕ್ಸಿಮೀಟರ್ ಮತ್ತು ಪೀಡಿತ ಸ್ಥಾನಗಳ ಬಗೆಗಿನ ಪ್ರಾಮುಖ್ಯತೆಗಳನ್ನು ಸಾರ್ವಜನಿಕ ಪ್ರಕಟಣೆಗಳ ಮೂಲಕ ತಿಳಿಸುವುದು.

c. ಸಾಮಾನ್ಯ ನಾಗರೀಕರನ್ನು ತಲುಪಲು ಹೈಪರ್-ಲೋಕಲ್ ಸಾಮಾಜಿಕ ಮಾಧ್ಯಮವಾದ ವಾಟ್ಸ್‌ಪ್ ಗ್ರೂಪ್‌ಗಳನ್ನು ಬಳಸುವುದು. ಡಿಜಿಟಲ್ ಅಕ್ಷರತೆಯ ಅರಿವಿಲ್ಲದವರಿಗೂ ಸುದ್ದಿಯನ್ನು ತಲುಪಿಸುವ ಉದ್ದೇಶದಿಂದ ಸ್ವಯಂಸೇವಕರ ನೆಟ್‌ವರ್ಕ್‌ನ್ನು ಸ್ಥಾಪಿಸಬೇಕು.

d. ವಿವಿಧ ಭಾಷೆಗಳಲ್ಲಿ ಮುದ್ರಿತವಾದ ಐ.ಇ.ಸಿ ಮಾರ್ಗಸೂಚಿಗಳನ್ನು ಎಲ್ಲಾ ದಿನಸಿ ಅಂಗಡಿಗಳಿಗೆ ವಿತರಿಸುವುದು. ಆರೋಗ್ಯ ವೈದ್ಯಾಧಿಕಾರಿ ಮತ್ತು ಆರೋಗ್ಯಾಧಿಕಾರಿ ರವರು ಆಶಾ ಕಾರ್ಯಕರ್ತರು ಹಾಗೂ ಬಿ.ಎಲ್.ಐ IEC ಚಟುವಟಿಕೆಗಳಲ್ಲಿ ತೊಡಗಿಸುವುದು

Scanned by CamScanner

7. ವ್ಯಾಕ್ಸಿನೇಷನ್

ವಾರ್ಡ್ ವ್ಯಾಪ್ತಿಯಲ್ಲಿ ಲಸಿಕೆಯನ್ನು ಗರಿಷ್ಠ ಮಟ್ಟದಲ್ಲಿ ಯಶಸ್ವಿಗೊಳಿಸಲು ಮತ್ತು ಸಾರ್ವಜನಿಕರಿಗೆ ತಲುಪಿಸಲು ವಸತಿ ಪ್ರದೇಶಗಳಲ್ಲಿನ ನಾಗರೀಕರೊಂದಿಗೆ ಕಾರ್ಯನಿರ್ವಹಿಸುವುದು.

**ಹಿರಿಯ ಆರೋಗ್ಯ ಪರಿವೀಕ್ಷಕರು/ ಕಾರ್ಯದರ್ಶಿಗಳು, WDC ಸಭೆಯನ್ನು ಸರ್ಕಾರಿ ಆದೇಶದಲ್ಲಿ ಸೂಚಿಸಿರುವ ಅಜೆಂಡಾದಂತೆ ನಿಯತಕಾಲಿಕವಾಗಿ ಆಯೋಜಿಸುವುದು ಹಾಗೂ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಹಾಗೂ WDC ಸದಸ್ಯರು ಕೋವಿಡ್-19 ಸೋಂಕನ್ನು ತಡೆಗಟ್ಟಲು ಮೇಲ್ಕಂಡಂತೆ ಕ್ರಮ ವಹಿಸಲು ಹಾಗೂ ಸಹಕರಿಸಲು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

ಕಾರ್ಯದರ್ಶಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 194, ಗೊಟ್ಟಿಗೆರೆ ಹಾಗೂ
ಹಿರಿಯ ಆರೋಗ್ಯ ಪರಿವೀಕ್ಷಕರು, ಬಿಬಿಎಂಪಿ, ಬೆಂಗಳೂರು

ಪ್ರತಿಗಳನ್ನು:-

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
4. ಉಪ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
5. ಆರೋಗ್ಯ ವೈದ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
6. ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ.
7. ಸ್ಥಳೀಯ ನಾಗರಿಕ ಕಲ್ಯಾಣ ಸಂಸ್ಥೆಗಳು.

Scanned by CamScanner